# ಕರೀನಾಗೆ ಹಾಲಿವುಡ್ ಬೇಡವಂತೆ!



ಬಿಟೌನ್‌ನ ನಟಿಯರೆಲ್ಲ ಹಾಲಿವುಡ್ ಎಂದು ಕನವರಿಸತೊಡಗಿದ್ದರೆ, ಒಂದು ಕಾಲದ ಬಾಲಿವುಡ್ ರಾಣಿ ಕರೀನಾ ಕಪೂರ್ 'ನಾನಿಲ್ಲೇ ಖುಷಿಯಾಗಿದ್ದೇನೆ. ಇದೇ ಸಾಕು' ಎನ್ನುತ್ತಿದ್ದಾಳೆ. ಆಕೆಗೆ ಸಾಗರಗಳ ದಾಟುವ ಮಹತ್ವಾಕಾಂಕ್ಷೆಯೂ ಇಲ್ಲವಂತೆ. ತನಗಾಗಿ ಒಂದಷ್ಟು ಸಮಯ ಕೊಡಬೇಕಿದೆ. ಹೀಗಾಗಿ ಬಾಲಿವುಡ್ ಆಚೆಗಿನ ಬಣ್ಣದ ಲೋಕದ ನಂಟು ತನಗೆ ಬೇಡ ಎನ್ನುತ್ತಾಳೆ ಕರೀನಾ. ಈ ಹಿಂದೆಯೂ ಕರೀನಾ ಹಾಲಿವುಡ್ ಕಡೆಗಿನ ತನ್ನ ಅಭಿಪ್ರಾಯವನ್ನು ಹಂಚಿಕೊಂಡಿದ್ದಳು.

'ಪ್ರಿಯಾಂಕಾ ಚೋಪ್ರಾ, ದೀಪಿಕಾ ಪಡುಕೋಣೆಯಂತಹ ನಟಿಯರಿಗೆ ಹಾಲಿವುಡ್ ರತ್ನಗಂಬಳಿ ಹಾಸುತ್ತಿದೆ. ಉನ್ನತ ಮಟ್ಟಕ್ಕೆ ಏರಲು ಕಠಿಣ ಬದ್ಧತೆ ಬೇಕು. ಆ ಪ್ರಯತ್ನವನ್ನು ಪ್ರಿಯಾಂಕಾ, ದೀಪಿಕಾರಂತಹ ನಟಿಯರು ಹಾಕುತ್ತಿದ್ದಾರೆ. ಅದ್ಭುತವಾಗಿ ಸಾಧನೆ ಮಾಡುತ್ತಿದ್ದಾರೆ. ಆದರೆ, ನನ್ನ ಆದ್ಯತೆಗಳೇ ಬೇರೆ. ನಾನು ಜಗತ್ತನ್ನು ಆಳಬೇಕೆಂದು ಬಯಸುತ್ತಿಲ್ಲ. ನನಗಾಗಿ ಒಂದಷ್ಟು ಸಮಯ ನೀಡಬೇಕಷ್ಟೇ' ಎಂದಿದ್ದಾಳೆ ಕರೀನಾ.

ಕರೀನಾ ನಟಿಸುತ್ತಿರುವ ಸಿನಿಮಾಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಒಂದೇ ಬಾರಿಗೆ ಅನೇಕ ಸಿನಿಮಾಗಳಲ್ಲಿ ನಟಿಸುವುದು ತನಗೆ ಇಷ್ಟವಿಲ್ಲ ಎನ್ನುವ ಆಕೆ, ಸಿನಿಮಾಗಳಲ್ಲಿ ಕಡಿಮೆ ತೊಡಗಿಸಿಕೊಳ್ಳುವ ಸೂಚನೆ ನೀಡಿದ್ದಾಳೆ. 'ಐದಾರು ಸಿನಿಮಾಗಳನ್ನು ಒಟ್ಟಿಗೆ ಮಾಡುವುದರಿಂದ ಖುಷಿ ಸಿಗಲಾರದು. ಒಂದು ಸಿನಿಮಾ ಸಾಕು, ನಾನು ಎಂಜಾಯ್ ಮಾಡುತ್ತೇನೆ. 'ಉಡ್ತಾ ಪಂಜಾಬ್'ನಲ್ಲಿ ಚಿಕ್ಕ ಪಾತ್ರವಾದರೂ ಅದನ್ನು ಎಂಜಾಯ್ ಮಾಡಿದ್ದೇನೆ. ಖುಷಿ ಕೊಡುವ ಇಂತಹ ಸಿನಿಮಾಗಳಲ್ಲೇ ತೃಪ್ತಿ ಇದೆ' ಎಂದಿದ್ದಾಳೆ ಕರೀನಾ.



# ಬದಲಾಗುತ್ತಿರುವ ಬಣ್ಣದ ಜಗತ್ತು

'ಸ್ಲಂ ಡಾಗ್ ಮಿಲಿಯನೇರ್' ಚಿತ್ರದಿಂದ ಜಗತ್ತಿನ ಗಮನ ಸೆಳೆದ ಫ್ರೀಡಾ ಪಿಂಟೊ, ಬಾಲಿವುಡ್ ಅಂಗಳದಲ್ಲಿ ಓಡಾಡಿದ್ದು ತೀರಾ ಕಡಿಮೆ. ವಿದೇಶಿ ಸಿನಿಮಾಗಳಲ್ಲೇ ಆಕೆಯ ಸಿನಿಮಾ ಯಾನ ಮುಂದುವರಿದಿದೆ. ಹಾಗೆಂದು, ಹಿಂದಿ ಚಿತ್ರರಂಗದೆಡೆಗಿನ ಆಕೆಯ ಆಸಕ್ತಿಯೇನೂ ಕಡಿಮೆಯಾಗಿಲ್ಲ. ಈಗಿನ ಸಿನಿಮಾಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ಆಕೆ ಹೇಳಿಕೊಂಡಿದ್ದಾಳೆ. ಮಹಿಳಾ ಪ್ರಧಾನ ಚಿತ್ರಗಳ ವಿಚಾರದಲ್ಲಿ ಅಗತ್ಯವಾಗಿದ್ದ ಬದಲಾವಣೆಯನ್ನು ಗುರುತಿಸಿರುವುದಾಗಿ ಫ್ರೀಡಾ ಹೇಳಿಕೊಂಡಿದ್ದಾಳೆ. ಆಕೆಯ ಪ್ರಕಾರ, ಹಿಂದಿ ಚಿತ್ರರಂಗದಲ್ಲಿ ನಟಿಯರ ಸ್ಥಾನ ತುಸು ಬದಲಾದರೂ, ನಾಯಕಿಯರ ಪಾತ್ರಗಳು ಬದಲಾಗಿಲ್ಲ. ಒಂದು ಚಿತ್ರ ನಾಯಕಿ ಪ್ರಧಾನವಾಗಿ ಇರುವುದಕ್ಕಿಂತಲೂ, ಗಟ್ಟಿಯಾದ ಮಹಿಳಾ ಪಾತ್ರಗಳನ್ನು ಸೃಷ್ಟಿಸುವುದೇ ಹೆಚ್ಚು ಮುಖ್ಯ ಎನ್ನುವುದು ಆಕೆಯ ಅಭಿಪ್ರಾಯ.

'ನಾನು ಬಾಲಿವುಡ್‌ನಲ್ಲಿ ಕಾಣಿಸಿಕೊಳ್ಳದೆಯೇ ಇರಬಹುದು. ಆದರೆ ಒಬ್ಬ ವೀಕ್ಷಕಿಯಾಗಿ ಭಾರತೀಯ ಸಿನಿಮಾಗಳ ಕುರಿತು ನನ್ನ ಅಭಿಪ್ರಾಯ ಹಂಚಿಕೊಳ್ಳಬಹುದು. ಬಾಲಿವುಡ್‌ನಲ್ಲಿ ಮಹತ್ವದ ಪರಿವರ್ತನೆ ಆಗುತ್ತಿದೆ. ಭಾರತದ ಕುರಿತು ಹೇಳುವ ಅದ್ಭುತ ಕಥೆಗಳು ಬರುತ್ತಿವೆ. ಪ್ರಿಯಾಂಕಾ ಚೋಪ್ರಾಳ 'ಮೇರಿ ಕೋಮ್', ಕಂಗನಾ ರನೋಟ್‌ಳ 'ಕ್ವೀನ್' ಮುಂತಾದ ಚಿತ್ರಗಳನ್ನು ನೋಡಿದಾಗ, ನಟಿಯರು ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳುವ ಚಿತ್ರಗಳು ಮತ್ತಷ್ಟು ಬರಲಿವೆ ಎನಿಸುತ್ತಿದೆ. ಇದು ನಮ್ಮ ಬದುಕನ್ನು ಕೆಳಮಟ್ಟದಿಂದ ಅರ್ಥ ಮಾಡಿಕೊಳ್ಳಲು ಜನರಿಗೆ ನೆರವಾಗುತ್ತಿದೆ' ಎಂದಿದ್ದಾಳೆ ಆಕೆ.

'ಮಹಿಳಾ ಪಾತ್ರವೇ ಪ್ರಧಾನವಾಗಿದ್ದ ಮಾತ್ರಕ್ಕೆ ಮಹತ್ವದ ಬದಲಾವಣೆ ಆಗುತ್ತಿದೆ ಎನ್ನಲಾಗದು. ಏಕೆಂದರೆ, ಆ ಪಾತ್ರಗಳಲ್ಲಿನ ಗಟ್ಟಿತನವೂ ಅಷ್ಟೇ ಮುಖ್ಯ. ನನ್ನ ತಂದೆಗೆ ಶಬಾನಾ ಅಜ್ಮಿ ಮತ್ತು ಸ್ಮಿತಾ ಪಾಟೀಲ್ ಅವರ ಸಿನಿಮಾಗಳೆಂದರೆ ಇಷ್ಟ. ಅವರದು ಶಕ್ತಿಶಾಲಿ ಮಹಿಳಾ ಪಾತ್ರಗಳಾಗುತ್ತಿದ್ದವು. 90ರ ದಶಕದಲ್ಲಿ ಇಂತಹ ಪಾತ್ರಗಳ ಸೃಷ್ಟಿ ಕಡಿಮೆಯಾಗಿತ್ತು. ಈಗ ಖಂಡಿತವಾಗಿಯೂ ಇದರಲ್ಲಿ ಬದಲಾವಣೆ ಕಾಣಿಸುತ್ತಿದೆ' ಎಂದಿದ್ದಾಳೆ ಫ್ರೀಡಾ.

■ ಅಮಿ